ಸಕಲೇಶಪುರ ತಾಲ್ಲೂಕಿನ ಹೆತ್ತೂರಿನಲ್ಲಿ 66/11 ಕೆ.ವಿ. ವಿದ್ಯುತ್ ಉಪಕೇಂದ್ರದ ಸ್ಥಾಪನೆಯ ಉದ್ದೇಶಕ್ಕಾಗಿ ಕ.ವಿ.ಪ್ರ.ನಿ.ನಿ.ಯು ಒಟ್ಟು 2 ಎಕರೆ 20 ಗುಂಟೆ ಜಮೀನನ್ನು ಖರೀದಿಸಿರುತ್ತದೆ.

ಪ್ರಸ್ತುತ ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ಸಕಲೇಶಪುರ, ಯಸಳೂರು, ಹಾನಬಾಳು ಮತ್ತು ಬಾಳುಪೇಟೆಗಳಲ್ಲಿ – 4 ಸಂಖ್ಯೆಗಳ 66/11 ಕೆ.ವಿ.ವಿದ್ಯುತ್ ಉಪ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಪ್ರಸ್ತುತ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಗ್ರಾಮಕ್ಕೆ ಅಂದಾಜು 12 ಕಿ.ಮೀ. ದೂರದಲ್ಲಿರುವ ಯಸಳೂರು ವಿದ್ಯುತ್ ಉಪ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದೆ.

ಯಸಳೂರಿನ ಸಬ್‌ಸ್ಟೇಷನ್ 6.3 ಎಂ.ವಿ.ಎ ಸಾಮರ್ಥ್ಯದ ಒಂದು ಟ್ರಾನ್ಸ್‌ಫಾರ್ಮರ್ ಹೊಂದಿದ್ದು, ಈ ಸ್ಟೇಷನ್ನಿನ ಲೋಡ್ 2.15 ಮೆ.ವ್ಯಾ. ನಷ್ಟಿದ್ದು, ಟ್ರಾನ್ಸ್‌ಫಾರ್ಮರ್‌ಗೆ ಶೇಕಡ 37.77 ಮಾತ್ರ ಲೋಡ್ ಇದೆ.

ಸಕಲೇಶಪುರ ತಾಲ್ಲೂಕಿನ ಹಾನಬಾಳುವಿನಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರವನ್ನು ದಿನಾಂಕ: 27–02–2008 ರಂದು ಹಾಗೂ ಬಾಳುಪೇಟೆಯಲ್ಲಿ 66/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು 31–03–2008 ರಂದು ಚಾಲನೆಗೊಳಿಸಲಾಗಿರುತ್ತದೆ.

ಹೆತ್ತೂರಿನಲ್ಲಿ ಸ್ಥಾಪಿಸಲು ಉದ್ದೆಶಿಸಿರುವ ವಿದ್ಯುತ್ ಉಪ ಕೇಂದ್ರಕ್ಕೆ ಅಗತ್ಯವಿರುವ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರೂ ಸಹಾ, ಮೇಲಿನ ಅಂಶಗಳನ್ನು ಗಮನಿಸಿ, ಮುಂದಿನ ವರ್ಷಗಳಲ್ಲಿ ವಿದ್ಯುತ್ ಬೇಡಿಕೆಯಲ್ಲಿ ಉಂಟಾಗಬಹುದಾದ ಹೆಚ್ಚಳವನ್ನು ಆದರಿಸಿ, ಹೆತ್ತೂರಿನಲ್ಲಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

**ಬೇಗೂರು ಔಟ್ ಪೊಲೀಸ್ ಠಾಣೆ ಮೇಲ್ದರ್ಜೆಗೇರಿಸುವುದು**

**872 (1082) ಶ್ರೀ ಮಹದೇವಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ)** : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಂಡುಪೇಟೆ ತಾಲ್ಲೂಕು ಬೇಗೂರು ಗ್ರಾಮದ ಪೊಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಕಳೆದ 6 ವರ್ಷ ಗಳಿಂದ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಪೊಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸದೆ ಇರಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಇ) ಪ್ರಸಕ್ತ ಸಾಲಿನಲ್ಲಿ ಸರ್ಕಾರ ಕ್ರಮ ವಹಿಸುವುದೇ?

**ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :**

ಅ) ಬಂದಿದೆ.

ಆ) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು 2011-12ನೇ ಸಾಲಿನಲ್ಲಿ 10 ಹೊಸ ಪೊಲೀಸ್ ಠಾಣೆಗಳನ್ನು, 8 ಸಂಚಾರಿ ಪೊಲೀಸ್ ಠಾಣೆಗಳನ್ನು, 7 ಹೊರ ಠಾಣೆಗಳನ್ನು ಮೇಲ್ದರ್ಜೆಗೇರಿಸುವುದು ಹಾಗೂ 8 ಹೊರ ಠಾಣೆ ಸೃಜನೆಯ ಸಂಬಂಧದಲ್ಲಿ ಸಲ್ಲಿಸಿರುವ ಕ್ರೋಡೀಕೃತ ಪ್ರಸ್ತಾವನೆಯಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬೇಗೂರು ಗ್ರಾಮದ ಪೊಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸುವುದು ಸೇರಿರುತ್ತದೆ. ಸದರಿ ಪ್ರಸ್ತಾವನೆಗೆ ತಗಲುವ ಒಟ್ಟು ಆವರ್ತಕ ವೆಚ್ಚ ರೂ.25,13,02,176/- ಹಾಗೂ ಅನಾವರ್ತಕ ವೆಚ್ಚ ರೂ.2,45,34,000/- ತಗಲುತ್ತದೆ.

2011-12ನೇ ಸಾಲಿನ ಲೆಕ್ಕ ಶೀರ್ಷಿಕೆ 2055-00-800-0-01 ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವುದು ಇದರಡಿಯಲ್ಲಿ ಒಟ್ಟು ರೂ.850.05 ಲಕ್ಷ ಅನುದಾನ ಒದಗಿಸಿದ್ದು, ಈ ಅನುದಾನವು ಹಿಂದಿನ ಸಾಲುಗಳಲ್ಲಿ ಮಂಜೂರು ಮಾಡಿರುವ ಪೊಲೀಸ್ ಠಾಣೆಗಳ ವೆಚ್ಚವನ್ನು ಭರಿಸಬೇಕಾಗಿರುತ್ತದೆ.

ಇ) ಮೇಲೆ ನೀಡಿರುವ ವಿವರಣೆಯ ಹಿನ್ನೆಲೆಯಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ 2011-12ನೇ ಸಾಲಿನಲ್ಲಿ ಬೇಗೂರು ಗ್ರಾಮದ ಪೊಲೀಸ್ ಹೊರ ಠಾಣೆಯನ್ನು ಮೇಲ್ದರ್ಜೆಗೇರಿಸಲು ಪರಿಶೀಲಿಸಲಾಗುವುದು.